ಖ) ವಿಷಯ: ಸಕಲೇಶಪುರ ತಾಲ್ಲೂಕಿನಲ್ಲಿ ಅತಿ ಹೆಚ್ಚು ಮಳೆಯಿಂದಾಗಿ ಏಲಕ್ಕಿ ಬೆಳೆಗೆ ಕೊಕ್ಕೆಕಂದು ಮತ್ತು ಕಟ್ಟೆ ರೋಗ ವ್ಯಾಪಿಸಿರುವ ಬಗ್ಗೆ

ಶ್ರೀ ಹೆಚ್. ಡಿ. ರೇವಣ್ಣ (ಹೊಳೆನರಸೀಪುರ): ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಹೆತ್ತೂರು, ಯಸಳೂರು ಮತ್ತು ಹಾನಬಾಳು ಪ್ರದೇಶಗಳಲ್ಲಿ ಅತಿ ಹೆಚ್ಚು ಮಳೆಯಾದ ಕಾರಣ ಏಲಕ್ಕಿ ಬೆಳೆಗೆ ಗುಣಪಡಿಸಲಾಗದ ರೋಗದಿಂದ ಬೆಳೆ ನಾಶವಾಗಿದ್ದು ರೈತರು ಆರ್ಥಿಕ ತೊಂದರೆಗೆ ಒಳಗಾಗಿರುವ ಬಗ್ಗೆ ಮಾನ್ಯ ತೋಟಗಾರಿಕೆ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಎ. ರವೀಂದ್ರನಾಥ್ (ಮಾನ್ಯ ತೋಟಗಾರಿಕೆ ಸಚಿವರು): ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನಲ್ಲಿ ಒಟ್ಟು 7390 ಹೆಕ್ಟೇರ್ ಪ್ರದೇಶದಲ್ಲಿ ಏಲಕ್ಕಿ ಬೆಳೆ ಬೆಳೆಯುತ್ತಿದ್ದು, ಸದರಿ ತಾಲ್ಲೂಕಿನ ಹೆತ್ತೂರು, ಯಸಳೂರು ಹಾಗೂ ಹಾನುಬಾಳು ಪ್ರದೇಶಗಳಲ್ಲಿ ಏಲಕ್ಕಿ ಬೆಳೆಯು ಕೊಕ್ಕೆಕಂದು ಮತ್ತು ಕಟ್ಟೆ ರೋಗಕ್ಕೆ ತುತ್ತಾಗಿದ್ದು, ಅಂದಾಜು ಶೇ. 40 ರಷ್ಟು ವಿಸ್ತೀರ್ಣದಲ್ಲಿ ಕೊಕ್ಕೆಕಂದು ಹಾಗೂ ಶೇ. 60 ಪ್ರದೇಶದಲ್ಲಿ ಕಟ್ಟೆ ರೋಗವಿರುವುದು ಕಂಡು ಬಂದಿರುತ್ತದೆ.

ಕೊಕ್ಕೆದಂದು ರೋಗ: ಏಲಕ್ಕಿ ಬೆಳೆಯಲ್ಲಿ ಇದು ವೈರಸ್ ನಿಂದ ಬರುವ ರೋಗವಾಗಿದ್ದು ಈ ರೋಗ ನಿಯಂತ್ರಣಕ್ಕೆ ಹತೋಟಿ ಕ್ರಮ ಇರುವುದಿಲ್ಲ. ಗಿಡಗಳನ್ನು ಪೂರ್ಣವಾಗಿ ತೆಗೆದು ನಾಶ ಮಾಡುವುದೊಂದೆ ಹತೋಟಿ ಕ್ರಮ ಆಗಿರುತ್ತದೆ.

ಕಟ್ಟೆ ರೋಗ: ಇದು ಸಹಾ ವೈರಸ್‌ನಿಂದ ಬರುವ ರೋಗವಾಗಿದ್ದು (ಸಸ್ಯ ಹೇನಿನ ಮೂಲಕ ಹರಡುತ್ತದೆ) ಈ ರೋಗಕ್ಕೆ ತುತ್ತಾಗಿದ್ದ ಗಿಡಗಳು ನಾಟಿಗೆ ಬಳಸುವುದರಿಂದ ಕಟ್ಟೆರೋಗ ಹರಡುತ್ತದೆ. ರೋಗಕ್ಕೆ ತುತ್ತಾದ ಕಂದು ಮತ್ತು ಗೆಡ್ಡೆಗಳನ್ನು ತೆಗೆದು ನಾಶ ಪಡಿಸಿ ಸುಟ್ಟು ಹಾಕಲು ತಾಂತ್ರಿಕ ಸಲಹೆ ನೀಡಲಾಗುತ್ತಿದೆ.

ಏಲಕ್ಕಿ ಬೆಳೆಯು ರೋಗದಿಂದ ತುತ್ತಾಗಿ ರೈತರು ಸಂಕಷ್ಟದಲ್ಲಿದ್ದು ಪರಿಹಾರ ಕಂಡುಕೊಳ್ಳುವ ಬಗ್ಗೆ ಜಿಲ್ಲಾಧಿಕಾರಿಗಳು ಹಾಸನ ರವರು ಡೀನ್ ಕೃಷಿ ಕಾಲೇಜು, ಹಾಸನ ರವರ ಅಧ್ಯಕ್ಷತೆಯಲ್ಲಿ ತಾಂತ್ರಿಕ ತಂಡ ರಚಿಸಲಾಗಿದೆ. ಈ ತಂಡವು ಈಗಾಗಲೇ ಸಕಲೇಶಪುರ ತಾಲ್ಲೂಕಿನ ರೋಗಪೀಡಿತ ತೋಟಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದು ಹಾಗೂ ರೈತರೊಂದಿಗೆ

ಚರ್ಚಿಸಿ ಮಾಹಿತಿಯನ್ನು ಸಂಗ್ರಹಿಸಿ ವರದಿಯನ್ನು ಹಾಸನದ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗಿದೆ ಎಂದು ತಿಳಿದುಬಂದಿದೆ.

ಏಲಕ್ಕಿ ಬೆಳೆಯು ಸಾಂಬಾರು ಬೆಳೆಯಾಗಿದ್ದು ಕೇಂದ್ರ ಸರ್ಕಾರದ ಸಾಂಬಾರು ಮಂಡಳಿಯ ವ್ಯಾಪ್ತಿಗೆ ಬರುತ್ತದೆ. ಏಲಕ್ಕಿ ಬೆಳೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಾಂಬಾರು ಮಂಡಳಿ ವತಿಯಿಂದ ರೈತರಿಗೆ ತೋಟಗಳ ಅಭಿವೃದ್ಧಿ (ಪ್ರದೇಶ ವಿಸ್ತರಣೆ)/ಪುನಶ್ಚೇತನಕ್ಕೆ ಪ್ರತಿ ಹೆಕ್ಟೇರ್‌ಗೆ ರೂ. 27,000/– ರಂತೆ ಸಹಾಯ ಧನ ನೀಡಲಾಗಿದತ್ತು. ತೋಟಗಾರಿಕೆ ಇಲಾಖೆಯ ವತಿಯಿಂದ ಸಸ್ಯ ಸಂರಕ್ಷಣಾ ಔಷಧಿಗಳ ವಿತರಣಾ ಯೋಜನೆಯಡಿ ಶೇ. 50ರ ದರದಲ್ಲಿ ಏಲಕ್ಕಿ ಬೆಳೆಗಾರರಿಗೆ ಸಹಾಯಧನವನ್ನು ನೀಡಲಾಗುತ್ತಿದೆ.

ಏಲಕ್ಕಿ ಬೆಳೆಗೆ ಕೊಕ್ಕೆಕಂದು ಮತ್ತು ಕಟ್ಟೆ ರೋಗದಿಂದ ಹಾನಿಯಾಗಿರುವ ಬಗ್ಗೆ ಜಿಲ್ಲಾಧಿಕಾರಿಗಳಿಂದ ವರದಿ ಪಡೆದು ಈ ಬಗ್ಗೆ ಏಲಕ್ಕಿ ಬೆಳೆಯುವ ರೈತರಿಗೆ ಸೂಕ್ತ ನೆರವು ನೀಡುವಂತೆ ಕೇಂದ್ರ ಸರ್ಕಾರದ ಸಾಂಬಾರು ಮಂಡಳಿಯನ್ನು ಕೋರಲಾಗುವುದು.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಒಟ್ಟು ನಾಲ್ಕು ಜಿಲ್ಲೆಗಳು ಏಲಕ್ಕಿ ಬೆಳೆಯುವಂಥ ಜಿಲ್ಲೆಗಳಿವೆ. ಅದರಲ್ಲಿ ಚಿಕ್ಕಮಗಳೂರು, ಹಾಸನ, ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಗಳು ಬರುತ್ತವೆ. ಈ ಬೆಳೆ ಬೆಳೆಯುವ ಒಂದು ಲಕ್ಷ ರೈತ ಕುಟುಂಬಗಳಿವೆ. ಈ ಒಂದು ಲಕ್ಷ ರೈತ ಕುಟುಂಬದವರು ಇಂದು ಬೀದಿ ಪಾಲಾಗುವ ಪರಿಸ್ಥಿತಿ ಬಂದಿದೆ. ಅವರು ಮಾಡಿರುವ ಸಾಲ ಸುಮಾರು 12 ಕೋಟಿ ರೂ.ಗಳದ್ದಾಗಿದೆ. ನಾನಲ್ಲ ಇದನ್ನು ಹೇಳುತ್ತಿರುವುದು. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರದ ವಾಣಿಜ್ಯ ಮತ್ತು ಕೈಗಾರಿಕೆ ಸಚಿವರಿಗೆ ಪತ್ರ ಬರೆದಿದ್ದಾರೆ. ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳು ಲೋಕಸಭಾ ಸದಸ್ಯರಾಗಿದ್ದಾಗ ಲೆಟರ್ ಬರೆದಿರುವ ಪ್ರತಿ ನನ್ನ ಬಳಿ ಇದೆ. ಇದನ್ನು ಬೇಕಾದರೆ ತಮ್ಮ ಗಮನಕ್ಕೆ ತರಲು ಕೊಡುತ್ತೇನೆ. ಇದರ ಜೊತೆಗೆ ದಿನಾಂಕ 12–10–2001 ರಲ್ಲಿ ಮುಖ್ಯಮಂತ್ರಿಗಳ ಕಛೇರಿಯಿಂದಲೇ . . .

ಅಧ್ಯಕ್ಷರು: ರೇವಣ್ಣನವರೆ, ಮಾನ್ಯ ಸಚಿವರು ಈಗಾಗಲೇ ಕೊಟ್ಟಿರುವ ಉತ್ತರದಲ್ಲಿ ಏನಾದರೂ ಕ್ಲಾರಿಫಿಕೇಶನ್ ಇದ್ದರೆ ಕೇಳಿ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಸಾಲ ಮನ್ನಾ ಮಾಡುವ ಬಗ್ಗೆ ಏನನ್ನೂ ಹೇಳಿಲ್ಲ. ಸಾಲ ಮನ್ನಾ ಮಾಡಬೇಕೆಂದು ಈಗ ಅವರ ಗಮನಕ್ಕೆ ತರುತ್ತಿದ್ದೇನೆ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಈಗಾಗಲೇ ಒಂದು ಟೀಮ್ ಮಾಡಿದ್ದಾರೆ.

ಅಧ್ಯಕ್ಷರು: ನೋಡಿ ರೇವಣ್ಣನವರೆ, ಏಲಕ್ಕಿ ಬೆಳೆಯುವ ಸದಸ್ಯರೇ ಇಲ್ಲಿ ಇದ್ದಾರೆ. ಅವರು ಕೂಡ ಮಾತನಾಡುತ್ತಾರೆ. ನೀವು ಏಲಕ್ಕಿ ಬೆಳೆಯುವುದಿಲ್ಲ. ಏಲಕ್ಕಿ ಬೆಳೆಗಾರರ ಪರವಾಗಿ ನೀವು ಕೇವಲ ಮಾನ್ಯ ಸಚಿವರ ಗಮನವನ್ನು ಸೆಳೆಯಬೇಕು ಮತ್ತು ಅದರ ಮೇಲೆ ಏನಾದರೂ ಕ್ಲಾರಿಫಿಕೇಶನ್ ಕೇಳುವುದಿದ್ದರೆ ಕೇಳಬೇಕು. ಚರ್ಚೆ ಮಾಡಬಾರದು.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಇಂದು ಒಂದು ಲಕ್ಷ ರೈತ ಕುಟುಂಬದವರ ಜೀವನದ ಪ್ರಶ್ನೆ ಇದರಲ್ಲಿ ಅಡಗಿದೆ. ಒಂದು ನಿಮಿಷ ನಾನು ಹೇಳಿಬಿಡುತ್ತೇನೆ. ಈಗಾಗಲೇ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒಂದು ಟಿಮ್ ಮಾಡಿದ್ದರು. ಆ ಟೀಮ್ ನವರು ಏಲಕ್ಕಿ ಬೆಳೆಗಾರರು ಮಾಡಿರುವ 12 ಕೋಟಿ ರೂ.ಗಳ ಸಾಲವನ್ನು ಮನ್ನಾ ಮಾಡಬೇಕೆಂದು ರಿಪೋರ್ಟ್ ಕೊಟ್ಟಿದ್ದಾರೆ. ನಿಮಗೆ ಬೇಕಾದರೆ ಆ ರಿಪೋರ್ಟ್‌ನ ಪ್ರತಿಯನ್ನು ತಮ್ಮ ಅವಗಾಹನೆಗಾಗಿ ಕೊಡುತ್ತೇನೆ. ಈಗಾಗಲೇ ಕಾಫಿ ಬೆಳೆಗಾರರ 12 ಕೋಟಿ ರೂ.ಗಳ ಸಾಲವನ್ನು ಮನ್ನಾ ಮಾಡಿದ್ದೀರಿ. ಅದೇ ರೀತಿ ಇದನ್ನು ಮನ್ನಾ ಮಾಡಿ. ಪಾಪ ಆ ಭಾಗದ ರೈತರು ಬಹಳ ಕಷ್ಟದಲ್ಲಿದ್ದಾರೆ. ಇವತ್ತು ರಾಜ್ಯದಲ್ಲಿ ಅತಿ ಹೆಚ್ಚು ರೈತರು ಸಾಯುತ್ತಿರುವುದು ಹಾಸನ ಜಿಲ್ಲೆಯಲ್ಲಿ. ಬೇರೆ ಕಡೆ ಆಲೂಗಡ್ಡೆ ಬೆಳೆಗಾರರು ಇದ್ದಾರೆ. ತೋಟಗಾರಿಕಾ ಮಂತ್ರಿಗಳಿಗೂ ಕೂಡ ಗೊತ್ತು. ಆದರೆ ಅವರು ಏನು ಮಾಡುವುದಕ್ಕೆ ತಯಾರಿರಲಿಲ್ಲ. ಕಡೇ ಪಕ್ಷ ಏಲಕ್ಕಿ ಬೆಳೆಗಾರರನ್ನಾದರೂ ಉಳಿಸಿ ಸ್ವಾಮಿ.

ಅಧ್ಯಕ್ಷರು: ಆಯಿತು. ಈಗ ಕುಮಾರಸ್ವಾಮಿಯವರು ಏಲಕ್ಕಿ ಬಎಳೆಗಾರರಾಗಿದ್ದಾರೆ. ಅವರು ಕೇಳುವುದಕ್ಕೆ ಬಿಡಿ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಉಮೇಶ್ ಕತ್ತಿಯವರು ತೋಟಗಾರಿಕಾ ಸಚಿವರಾಗಿದ್ದಾಗ ಎಷ್ಟು ಜನ ರೈತರು ಸತ್ತಿದ್ದಾರೆ ಎಂಬುದನ್ನು ಬೇಕಾದರೆ ನೀವು ಕೇಳಿ. ಆಲೂಗೆಡ್ಡೆ ಬೆಳೆಗಾರರಿಗೆ ಸುಮಾರು 250 ಕೋಟಿ ನಷ್ಟವಾಯಿತೆಂದು ಜಿಲ್ಲಾಧಿಕಾರಿಗಳೇ ವರದಿ ಕೊಟ್ಟಿದ್ದಾರೆ. ನಾನು ಈ ವರದಿಯನ್ನು ಕೊಟ್ಟವನಲ್ಲ. ಇವತ್ತು 12 ಕೋಟಿ ಸಾಲ ಮನ್ನಾ ಮಾಡುವುದು ಯಾವ ದೊಡ್ಡ ವಿಷಯ ಸ್ವಾಮಿ. ದಯಮಾಡಿ 12 ಕೋಟಿ ಸಾಲವನ್ನು ಮನ್ನಾ ಮಾಡಿ ಆ ಭಾಗದ ರೈತರನ್ನು ಉಳಿಸಿಕೊಡಿ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮಂತ್ರಿಯವರು ಉತ್ತರ ಕೊಟ್ಟಿದ್ದಾರೆ. ಈಗಾಗಲೇ ನಾಲ್ಕು ಜಿಲ್ಲೆಗಳಲ್ಲಿ ಅದರಲ್ಲೂ ಕೂಡ ನನ್ನ ಕ್ಷೇತ್ರದ

ಹಾನಬಾಳು, ಯಸಳೂರು, ಹೆತ್ತೂರು ಹಾಗೂ ಬೇಲೂರು ಸೇರಿದಂತೆ ಈ ಎಲ್ಲಾ ಪ್ರದೇಶಗಳಲ್ಲಿ ಏಲಕ್ಕಿ ಬೆಳೆಗಳಿಗೆ ಕೊಕ್ಕೆಕಂದು ಮತ್ತು ಕಟ್ಟೆ ರೋಗಗಳಿಂದ ಸಾಕಷ್ಟು ಇಳುವರಿ ಕಡಿಮೆಯಾಗಿದೆ. 200–350 ಇಂಚು ಮಳೆ ಬೀಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆ. ಮಾನ್ಯ ರೇವಣ್ಣನವರು ಹೇಳಿದ ಹಾಗೆ ಹಿಂದೆ ಇದೇ ಸಂಕಷ್ಟದಲ್ಲಿರತಕ್ಕಂಥ ಕಾಫಿ ಬೆಳೆಗಾರರಿಗೆ ಸಾಲ ಮನ್ನಾ ಮಾಡಿದ್ದಾರೆ. ಶೇಕಡಾ 3ರ ಬಡ್ಡಿ ದರದಲ್ಲಿ ಈಗ ಸಾಲ ಕೊಡುತ್ತಿದ್ದೇವೆ. ಇದೇ ಸವಲತ್ತನ್ನು ಏಲಕ್ಕಿ ಬೆಳೆಗಾರರಿಗೂ ವಿಸ್ತರಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ರೂ. 2 ಕೋಟಿ, ಹಾಸನ ಜಿಲ್ಲೆಯಲ್ಲಿ ರೂ. 4 ಕೋಟಿ, ತಮ್ಮ ಜಿಲ್ಲೆಯಾದ ಕೂರ್ಗ್‌ನಲ್ಲಿ ರೂ. 2 ಕೋಟಿ, ಶಿವಮೊಗ್ಗ ಜಿಲ್ಲೆಯಲ್ಲಿ ರೂ. ಒಂದು ಕೋಟಿ, ಸಹಕಾರಿ ಸಾಲ ರೂ. 1 ಕೋಟಿ ಒಟ್ಟು 12 ಕೋಟಿ ರೂ.ಗಳ ಸಾಲ ಒಂದು ಲಕ್ಷದ ರೈತರ ಪರವಾಗಿ ಇದೇನೂ ದೊಡ್ಡದಲ್ಲ. ಇವತ್ತು ಕಾಫಿ ಬೆಳೆಗಾರರು ಹಾಗೂ ಏಲಕ್ಕಿ ಬೆಳೆಗಾರರು ತುಂಬಾ ಶ್ರೀಮಂತರೆನ್ನುವ ಮಾತಿದೆ. ಆದರೆ ಕಾಫಿ ಹಾಗೂ ಏಲಕ್ಕಿ ಬೆಳೆಗಾರರು ಹೆಚ್ಚು ಮಂದಿ ಆತ್ಮಹತ್ಯೆಗೆ ಶರಣಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆ. ದಯಮಾಡಿ ಸಾಲವನ್ನು ಮನ್ನಾ ಮಾಡಬೇಕು. ಕಾಫಿ ಬೆಳೆಗಾರರಿಗೆ ಕೊಡುವಂತಹ ರೀತಿಯಲ್ಲಿ ಏಲಕ್ಕಿ ಬೆಳೆಗಾರರಿಗೆ ಶೇಕಡ 3ರ ಬಡ್ಡಿ ದರದಲ್ಲಿ ಸಾಲವನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು) :– ಮಾನ್ಯ ಜನತಾದಳದ ನಾಯಕರಾದಂತಹ ರೇವಣ್ಣನವರು ಗಮನ ಸೆಳೆಯುವ ಸೂಚನೆಯಲ್ಲಿ ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಹೆತ್ತೂರು, ಯಸಳೂರು ಮತ್ತು ಹಾನಬಾಳು ಪ್ರದೇಶಗಳಲ್ಲಿ ಅತಿ ಹೆಚ್ಚು ಮಳೆಯಾದ ಕಾರಣ ಏಲಕ್ಕಿ ಬೆಳೆಗೆ ಗುಣಪಡಿಸಲಾಗದ ರೋಗದಿಂದ ಬೆಳೆ ನಾಶವಾಗಿದ್ದು, ರೈತರು ಆರ್ಥಿಕ ತೊಂದರೆಗೆ ಒಳಗಾಗಿರುವ ಬಗ್ಗೆ ಮಾನ್ಯ ತೋಟಗಾರಿಕಾ ಸಚಿವರ ಗಮನ ಸೆಳೆಯುತ್ತೇನೆಂದು ಹೇಳಿದ್ದಾರೆ.

ಅಧ್ಯಕ್ಷರು : ಈಗ ಅವರು ಪ್ರಮುಖವಾಗಿ ಪ್ರಸ್ತಾಪ ಮಾಡಿರುವುದು ಎರಡು ವಿಚಾರ, ಒಂದು ಕಟ್ಟೆ ರೋಗದಿಂದ ಏಲಕ್ಕಿ ಬೆಳೆ ನಾಶ ಹಾಗೂ ಸಾಲ ಮನ್ನಾ ಇದರ ಬಗ್ಗೆ ಮಾತ್ರ ಉತ್ತರ ಹೇಳಿ.

ಶ್ರೀ ಉಮೇಶ್ ವಿ. ಕತ್ತಿ :– ಏಲಕ್ಕಿ ಬೆಳೆಗಳು ಮಳೆಯಿಂದ ಹಾನಿಯಾಗಿದ್ದು ನಿಜ. ಹಳೇ ಗಿಡಗಳನ್ನು ಕಿತ್ತು ಹಾಕಿ, ಹೊಸ ಏಲಕ್ಕಿ ಬೆಳೆಗಳನ್ನು ನಾಟಿ ಮಾಡಬೇಕು.

ಈಗಾಗಲೇ ಸಾಂಬಾರು ಮಂಡಳಿಯಿಂದ 2 ಲಕ್ಷ ಹೊಸ ಸಸಿಗಳನ್ನು ಎರಡು ನೂರು ರೈತರಿಗೆ ಕೊಡಲಾಗಿದೆ. ಇನ್ನೂ ಬೇಕಾದರೆ ಕೊಡಿಸುವಂತಹ ವ್ಯವಸ್ಥೆ ಮಾಡಲಾಗುವುದು. ಆದರೆ ಸಾಲವನ್ನು ಮನ್ನಾ ಮಾಡುವ ವಿಚಾರದ ಬಗ್ಗೆ ಗಮನ ಸೆಳೆಯುವ ಸೂಚನೆಯಲ್ಲಿ ತಾವು ಚರ್ಚೆ ಮಾಡುತ್ತಿದ್ದೀರಿ. ಈ ವಿಷಯ ಸದನದ ಮುಂದೆ ಇಲ್ಲ. ಏಲಕ್ಕಿ ಬೆಳೆಗೆ ರೋಗ ತಗುಲಿ ರೈತರು ತೊಂದರೆಗೆ ಸಿಕ್ಕಿಹಾಕಿಕೊಂಡಿರುವುದು ನಿಜ. ರೋಗ ತಗುಲಿದ ಗಿಡಗಳನ್ನು ತೆಗೆದು ಹಾಕಿ ಹೊಸ ಗಿಡಗಳನ್ನು ನಾಟಿ ಮಾಡಬೇಕು. ಸಾಂಬಾರು ಮಂಡಳಿಯಿಂದ 20 ಸಾವಿರ ರೂಪಾಯಿಗಳ ಇನ್‌ಸೆಂಟಿವ್ ಕೊಟ್ಟು ಬಿತ್ತನೆ ಮಾಡುವುದಕ್ಕೆ ಅನುಕೂಲ ಆಗುತ್ತದೆ. ಆ ಕಾರ್ಯಕ್ರಮವನ್ನು ಉಪಯೋಗ ಮಾಡಿಕೊಳ್ಳಬೇಕೆಂದು ತಮ್ಮ ಮುಖಾಂತರ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :– ರೈತರ ಸಾಲ ಮನ್ನಾ ಮಾಡಿ ಎಂದು ಹೇಳುತ್ತಿರುವುದು ನಾನಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು letter ಕೊಟ್ಟಿರುವುದು. ಬೆಳೆ ಹಾಳಾಗಿರುವುದಕ್ಕೆ ದುಡ್ಡು ಕೊಡಿ ಎಂದು ಕೇಳುತ್ತಿರುವುದು

(ಗೊಂದಲ)

ಅಧ್ಯಕ್ಷರು :– ಕ್ರಮ ಕೈಗೊಳ್ಳುತ್ತೇವೆಂದು ಹೇಳಿದ್ದಾರೆ. ಅದನ್ನು ಗಂಭೀರವಾಗಿ ಪರಿಗಣಿಸಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಸನ್ಮಾನ್ಯ ಮುಖ್ಯಮಂತ್ರಿಯವರು ಸದನಕ್ಕೆ ಬಂದಿದ್ದಾರೆ.

ಶ್ರೀ ಹೆಚ್. ಡಿ. ರೇವಣ್ಣ :– ಮಾನ್ಯ ಅಧ್ಯಕ್ಷರೆ, ದಯಮಾಡಿ ವಾಪಸ್ಸು ತೆಗೆದುಕೊಳ್ಳಬೇಕು, ತಾವು ದಯಮಾಡಿ ಇದರ ಬಗ್ಗೆ ಹೇಳಬೇಕು. ಸನ್ಮಾನ್ಯ ಮುಖ್ಯಮಂತ್ರಿಯವರ letter ಗಾದರೂ ತಾವು ಗೌರವ ಕೊಡಿ.

(ಗೊಂದಲ)

ಶ್ರೀ ಹೆಚ್.ಕೆ. ಕುಮಾರಸ್ವಾಮಿ :– ಮಾನ್ಯ ಮುಖ್ಯಮಂತ್ರಿಯವರು ಸದನಕ್ಕೆ ಬಂದಿದ್ದಾರೆ.

ಶ್ರೀ ಹೆಚ್. ಡಿ. ರೇವಣ್ಣ :– ಅವರೇ letter ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಹೆಚ್.ಕೆ. ಕುಮಾರಸ್ವಾಮಿ :- ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಉತ್ತರ ಹೇಳಬೇಕು.

ಶ್ರೀ ಉಮೇಶ್ ವಿ. ಕತ್ತಿ :- ಮಾನ್ಯ ಅಧ್ಯಕ್ಷರೆ, ಇವರು ಕೇಳಿರುವ ಪ್ರಶ್ನೆ ಏನೆಂದರೆ ಏಲಕ್ಕಿ ಬೆಳೆ ಹಾಳಾಗಿದೆ ಎಂದು, ಹಾಳಾಗಿರುವುದು ನಿಜ.

ಶ್ರೀ ಹೆಚ್.ಡಿ. ರೇವಣ್ಣ :- ಬೆಳೆ ಹಾಳಾಗಿರುವುದಕ್ಕೆ ದುಡ್ಡು ಕೊಡಿ ಎಂದು ಕೇಳುತ್ತಿರುವುದು.

ಶ್ರೀ ಹೆಚ್. ಕೆ. ಕುಮಾರಸ್ವಾಮಿ :- ತಾವು ತಾಂತ್ರಿಕವಾಗಿ ಹೇಳುತ್ತಿದ್ದೀರಲ್ಲ.

(ಗೊಂದಲ)

ಅಧ್ಯಕ್ಷರು :- ಆಯಿತು, ಈ ವಿಷಯವನ್ನು ಮುಗಿಸೋಣ, ಗಮನ ಸೆಳೆಯುವ ಸೂಚನೆಯಲ್ಲಿ ಇನ್ನೇನು ವಿಷಯ ಕೇಳುವುದಕ್ಕೆ ಬರುತ್ತದೆ. ನೀವು ಬೇರೆ ರೀತಿಯಲ್ಲಿ ಚರ್ಚೆಗೆ ತನ್ನಿ.

(ಗೊಂದಲ)

ಶ್ರೀ ಹೆಚ್. ಡಿ. ರೇವಣ್ಣ :- ಅವರ ರಿಪೋರ್ಟ್ ಇದೆ. ನಮ್ಮ ವಿಚಾರ ಬೇಡ. ನಿಮ್ಮ ಅಧಿಕಾರಿಗಳಿಂದ ಈಗಿನ ಮಾನ್ಯ ಮುಖ್ಯಮಂತ್ರಿಗಳು ತರಿಸಿರುವಂತಹ ರಿಪೋರ್ಟ್ ಇದೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಯವರ ಲೆಟರ್‌ಗಾದರೂ ಗೌರವ ಕೊಡಿ.

ಅಧ್ಯಕ್ಷರು : ಸಾಕು, ಇದನ್ನು ಮುಕ್ತಾಯ ಮಾಡೋಣ.

ಶ್ರೀ ಉಮೇಶ್ ವಿ. ಕತ್ತಿ :- ಮಾನ್ಯ ಅಧ್ಯಕ್ಷರೆ, ಅವರು ಕೇಳಿರುವಂತಹ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ಸನ್ಮಾನ್ಯ ಮುಖ್ಯಮಂತ್ರಿಗಳೇ, ದಯಮಾಡಿ ಉತ್ತರ ಕೊಡಿ.

ಅಧ್ಯಕ್ಷರು :- ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆಂದು ನೀವು ಒತ್ತಾಯ ಮಾಡುವ ಹಾಗೆ ಇಲ್ಲ. ಈಗಾಗಲೇ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಕಿಮ್ಮನೆ ರತ್ನಾಕರ್‌ರವರು ಹೇಳಿ.

ಶ್ರೀ ಉಮೇಶ್ ವಿ. ಕತ್ತಿ :- ತಾವು ಕೇಳಿದಂತಹ ಪ್ರಶ್ನೆ ಸರಿಯಾದ ಉತ್ತರವನ್ನು ಈಗಾಗಲೇ ಕೊಟ್ಟಾಗಿದೆ.

(ಈ ಹಂತದಲ್ಲಿ ಶ್ರೀ ಹೆಚ್.ಕೆ. ಕುಮಾರಸ್ವಾಮಿಯವರು ಬಾವಿಗೆ ಬಂದರು)

ಅಧ್ಯಕ್ಷರು :– ಇದಕ್ಕೂ ಧರಣಿಗೆ ಬಂದರೆ ಹೇಗೆ ?

ಶ್ರೀ ಉಮೇಶ್ ವಿ. ಕತ್ತಿ :– ನಾವು ಅವರ ಸಹಾಯಕ್ಕೆ ಹೋಗುತ್ತಿದ್ದೇವೆ. ನಾಟಿ ಸಸಿಗಳನ್ನು ಕೊಡುತ್ತಿದ್ದೇವೆ. 27 ಸಾವಿರ ಸಸಿಗಳನ್ನು ಕೊಟ್ಟಿದ್ದೇವೆ, 10 ಸಾವಿರ ಹೊಸ ಸಸಿಗಳನ್ನು ಕೊಡುತ್ತಿದ್ದೇವೆ.

ಅಧ್ಯಕ್ಷರು :– ಇದು ಸರಿಯಲ್ಲ, ಕುಮಾರಸ್ವಾಮಿ ಅವರೇ ನೀವು ಸೀಟಿನ ಹತ್ತಿರ ಹೋಗಿ ಅಲ್ಲಿಂದ ಮಾತನಾಡಿ. ಬಾವಿಯಿಂದ ಮಾತನಾಡಬೇಡಿ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಅಧ್ಯಕ್ಷರೆ, ಸಾಲವನ್ನು ಮನ್ನಾ ಮಾಡಬೇಕೆಂದು ನನ್ನ ರಿಪೋರ್ಟ್ ಅಲ್ಲ ನಾನು ಹಿಡಿದುಕೊಂಡು ಮಾತನಾಡುತ್ತಿರುವುದು. ಇದನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಲಿ.

ಅಧ್ಯಕ್ಷರು :– ನೀವು ಮುಖ್ಯಮಂತ್ರಿಗಳಿಂದಲೇ ಉತ್ತರ ಬೇಕು ಎಂದು ಒತ್ತಾಯ ಮಾಡುವ ಹಾಗೆ ಇಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ :– ಮಾನ್ಯ ಮುಖ್ಯಮಂತ್ರಿಗಳು ಒಂದು ಸಲ ಉತ್ತರ ಹೇಳಲಿ, ಮಾನ್ಯ ಮುಖ್ಯಮಂತ್ರಿಗಳು ಇದರ ಕಡೆ ಗಮನ ಹರಿಸುತ್ತಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಸಚಿವರಿಗೆ ಕೈ ಮುಗಿಯುತ್ತೇನೆ. ತಾವು ದಯವಿಟ್ಟು ಮಾತನಾಡಬೇಡಿ.

ಅಧ್ಯಕ್ಷರು :– ತಾವು ಪ್ರತಿಯೊಂದು ವಿಚಾರಕ್ಕೂ ಧರಣಿ ಮಾಡುವುದಕ್ಕೆ ಬಾವಿಗೆ ಬಂದರೆ ಸದನ ನಡೆಸುವುದಕ್ಕೆ ಆಗುವುದಿಲ್ಲ. ಸಂಬಂಧಪಟ್ಟ ಸಚಿವರು ಇದಕ್ಕೆ ಉತ್ತರ ಕೊಟ್ಟಿದ್ದಾರೆ.

ಶ್ರೀ ಹೆಚ್. ಡಿ. ರೇವಣ್ಣ :– ಮಾನ್ಯ ಅಧ್ಯಕ್ಷರೆ, ದಯಮಾಡಿ ಇದಕ್ಕೆ ಸಹಕಾರ ಕೊಡದಿದ್ದರೆ ನಾವು ಧರಣಿಗೆ ಕುಳಿತುಕೊಳ್ಳುತ್ತೇವೆ. 12 ಕೋಟಿ ರೂಪಾಯಿಗಳು ಅಷ್ಟೇ ಇರುವುದು. ಜಗದೀಶ್ ಶೆಟ್ಟರ್ ಅವರೇ ನೀವು ರೈತರ ಪರ ಇರಿ.

(ಗೊಂದಲ)

ಅಧ್ಯಕ್ಷರು :– ಹೇಗೆ ನೀವು ಒತ್ತಡ ಮಾಡುವುದಕ್ಕಾಗುತ್ತದೆ ?

ಶ್ರೀ ಹೆಚ್.ಡಿ. ರೇವಣ್ಣ :– ನಾನು ಕೃಷಿ ಸಚಿವರನ್ನು ಕೇಳುವುದು, ಬೇರೆ ಜಿಲ್ಲೆಗೆ ಬೇಡ, ಹಾಸನ ಜಿಲ್ಲೆ ಒಂದಕ್ಕೆ ಮಾಡಿ ಎಂದು.....

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ.

ಶ್ರೀ ಹೆಚ್. ಡಿ. ರೇವಣ್ಣ :– ಮಾನ್ಯ ಜಗದೀಶ್ ಶೆಟ್ಟರ್‌ರವರೇ, ನೀವು ರೈತರ ಪರವಾಗಿ ಇರಿ.

ಶ್ರೀ ಉಮೇಶ್ ವಿ. ಕತ್ತಿ :– ಮಾನ್ಯ ಅಧ್ಯಕ್ಷರೆ, ಅವರು ಕೇಳಿರುವ ವಿಚಾರದಲ್ಲಿ ಸಾಲ ಮನ್ನಾ ಮಾಡುವ ಪ್ರಶ್ನೆಯೇ ಇಲ್ಲ. ಅದಕ್ಕೆ ಉತ್ತರ ಹೇಳಿ ಎಂದರೆ ಹೇಗೆ ಹೇಳಲಿ.

ಅಧ್ಯಕ್ಷರು :– ಕುಮಾರಸ್ವಾಮಿಯವರೇ ನೀವು ನಿಮ್ಮ ಸ್ಥಾನಕ್ಕೆ ಹೋಗಿ.

ಶ್ರೀ ಹೆಚ್.ಡಿ. ರೇವಣ್ಣ :– ದಯಮಾಡಿ ಮಾನ್ಯ ಮುಖ್ಯಮಂತ್ರಿಯವರ ಕಡೆಯಿಂದ ಹೇಳಿಸಿ.

ಶ್ರೀ ಹೆಚ್. ಸಿ. ಬಾಲಕೃಷ್ಣ :– ಮಾನ್ಯ ಮುಖ್ಯಮಂತ್ರಿಯವರು ಒಂದು ಮಾತು ಹೇಳಿಬಿಡಲಿ, ನಾವು ಕುಳಿತುಕೊಳ್ಳುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಮುಖ್ಯಮಂತ್ರಿಯವರೇ ನೀವೇ ಕೊಟ್ಟಿರುವುದು letter, ದಯಮಾಡಿ ನೀವೇ ಹೇಳಿ.

ಅಧ್ಯಕ್ಷರು :– ನೀವು ನಿಮ್ಮ ಸೀಟಿಗೆ ಹೋಗಿ.

ಶ್ರೀ ಡಿ.ವಿ. ಸದಾನಂದಗೌಡ :– ಮಾನ್ಯ ಅಧ್ಯಕ್ಷರೆ, ಏಲಕ್ಕಿ ಬೆಳೆಗಾರರ ಪರಿಸ್ಥಿತಿ ಬಗ್ಗೆ ಸ್ವಲ್ಪ ಮಟ್ಟಿನ ಅರಿವು ನನಗಿದೆ. ಇದರ ಬಗ್ಗೆ ಎರಡು ಮಾತಿಲ್ಲ. ಇದರ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಕ್ರಮಗಳನ್ನು ಕೈಗೊಳ್ಳುವ ಪ್ರಯತ್ನಗಳನ್ನು ಮಾಡುತ್ತೇವೆ.

ಅಧ್ಯಕ್ಷರು :– ಶ್ರೀ ಕಿಮ್ಮನೆ ರತ್ನಾಕರ್‌ರವರೆ, ತಾವು ಗಮನ ಸೆಳೆಯುವ ಸೂಚನೆ ಬಗ್ಗೆ ಕೇಳಿ. ಸೋಮಣ್ಣನವರು ಉತ್ತರ ಕೊಡಿ. ಅವರ ಬದಲು ಯಾರಾದರೂ ಉತ್ತರ ಕೊಡಬೇಕಲ್ಲ, ಯಾರಾದರೂ ಉತ್ತರ ಹೇಳಿ.